ಎತ್ತಿಕೊಂಡು ಹೋಗುವುದು ಹ್ಞೇಳಿ ? ಇವತ್ತು ಬರೀ ಉತ್ತರವನ್ನು ಕೊಟ್ಟರು ಅಷ್ಟೆ. ನಾನು ಸದನದಲ್ಲಿ ಹೇಳುತ್ತೇನೆ, ನಾವು ಮೈಸೂರು ನಗರಕ್ಕೆ ಹೋಗಬೇಕಾದರೆ ಎಲ್ಲಾ ವ್ಯವಸ್ಥೆ ಮಾಡುವುದಾದರೆ ನಾವು ಮೈಸೂರು ನಗರಕ್ಕೆ ಹೋಗುತ್ತೇವೆ. ಇಲ್ಲದಿದ್ದರೆ ನಾವು ಹೋಗುವುದಕ್ಕೆ ಸಾಧ್ಯವಿಲ್ಲ. ಇಡೀ ಜಿಲ್ಲೆಗೆ ಗಾಬರಿ ಹಬ್ಬಿದೆ. ಇಡೀ ಜಿಲ್ಲೆಯ ಶಾಸಕರುಗಳಿಗೆ ಗೊತ್ತಿದೆ. ಸುದ್ದಿ ಮಾಧ್ಯಮದವರಿಗೆ ನಾವು ಧನ್ಯವಾದಗಳನ್ನು ಹೇಳಬೇಕು. ಏಕೆಂದರೆ ಅವರು ಅವತ್ತು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಜನತೆಯು ಬಿಸಿ ನೀರನ್ನು ಕುಡಿಯಬೇಕೆಂದು ಸುದ್ದಿ ಹೇಳಿದ್ದರು. ನಗರ ಪಾಲಿಕೆ ಹೇಳಲಿಲ್ಲ ಇವತ್ತು ಕಾಲರಾಕ್ಕೆ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳಬೇಕೆಂದು ಪ್ರತಿ ಮನೆಯವರಿಗೆ ಮಾಧ್ಯಮದವರು ಪ್ರಚಾರ ಕೊಟ್ಟಿದ್ದಾರೆ. ನಾನು ಮೈಸೂರು ನಗರಕ್ಕೆ ಹೋಗುವುದರೊಳಗೆ ಈ ಸದನದ ಸದಸ್ಯತ್ವ ಪರ್ಮನೆಂಟ್ ಅಲ್ಲ. ನಾವು ಏನು ಕೆಲಸ ಮಾಡಿ ಹೋಗುತ್ತೇವೆ ಎನ್ನುವುದು ಪರ್ಮನೆಂಟ್. ಈ ಎಂ.ಎಲ್.ಎ.ಗಿರಿ ಪರ್ಮನೆಂಟ್ ಅಲ್ಲ. ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ನಮ್ಮ ಆರೋಗ್ಯ ಮಂತ್ರಿಗಳು ನಮ್ಮ ಜೊತೆಯಲ್ಲಿ ಬರಬೇಕು, ಮೈಸೂರು ನಗರದಲ್ಲಿ ಕೋ-ಆರ್ಡಿನೇಷನ್ ಇಲ್ಲ. ಕೆ.ಆರ್. ಆಸ್ಪತ್ರೆಯ ಡಾಕ್ಟರನ್ನು ಕೇಳಿದರೆ ಅವರು ಉತ್ತರ ಹೇಳುವುದಿಲ್ಲ. ಆದ್ದರಿಂದ ಇವತ್ತು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡಲು ತಾವು ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಮಾನ್ಯ ಅಧ್ಯಕ್ಷರೇ, ಈ ಘಟನೆಯಾಗಿರುವುದಕ್ಕೆ ಬಹಳ ದುಃಖವಾಗಿದೆ. ಸರ್ಕಾರದವರೂ ಸಹ ಇದನ್ನು ತೀವ್ರವಾಗಿ ಪರಿಗಣಿಸಿ ಪಬ್ಲಿಕ್ ಹೆಲ್ತ್ ಆಕ್ಟ್ ಅನ್ನು ಇನ್‌ಫೋಕ್ ಮಾಡಿ ಇದಕ್ಕೆ ಬೇಕಾದ ಎಲ್ಲಾ ಮದ್ದುಗಳನ್ನು ಸಪ್ಲೈ ಮಾಡಿ ಎಲ್ಲಾ ತರಹದ ರೋಗಿಗಳಿಗೆ ಬೆಡ್‌ಗಳನ್ನೂ ಸಹ ಡೈರೆಕ್ಟರ್ ಆಲ್ಲಿಗೇ ಹೋಗಿ ನೋಡಿದ್ದಾರೆ. ಬೇರೆ ಆಸ್ಪತ್ರೆಯಲ್ಲಿಯೂ ಸಹ ಆಲ್ಲಿ ಬೆಡ್‌ಗಳನ್ನು - They have made arrangements to make available beds in other hospitals. I would like to inform the Hon. Members that the Government is very serious about it. The Director of Health has been sent and has been asked to get the Doctors from nearby districts to see that the Cholera does not spread to Mysore and other parts of the District. As regards injections, there are plenty of injections. Recently 35000 injections have been supplied to Mysore District. We have directed the Deputy Commissioner and the Superintendent of Police to take all precautions to implement Public Health Act without any fear or favour and see that no more Cholera spreads. I request the Hon. Members also to co-operate with the officers. If they need any help from the Government if they inform us, we are prepared to give. Apart from this, we will see that some other officer is sent to Mysore from Bangalore to-day itself.

ಶ್ರೀ ಎಂ. ಪಿ. ವೆಂಕಟೇಶ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಆರೋಗ್ಯ ಸಚಿವರು ಇಲ್ಲ, ಇಲಾಖೆಯವರಿಗೆ ಹೆದರಿಕೆ ಇಲ್ಲ. ಆರೋಗ್ಯ ಇಲಾಖೆಯ ಸಚಿವರಿಂದ ಹೇಳಿಕೆ ಇಲ್ಲ.

ಅಧ್ಯಕ್ಷರು:- ಅವರು ಹೇಳುತ್ತಿದ್ದಾರೆ ಕೇಳಿ.

ಶ್ರೀ ಎಂ. ಪಿ. ವೆಂಕಟೇಶ್:- ಆರೋಗ್ಯ ಸಚಿವರು ಇಲ್ಲ, ಬೇರೆ ಸಚಿವರು ಉತ್ತರ ಕೊಡುತ್ತಿದ್ದಾರೆ. ನಾನು ಈ ನೀತಿಯನ್ನು ಪ್ರತಿಭಟನೆ ಮಾಡಿ ಹೊರಗೆ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ಎಂ. ಪಿ. ವೆಂಕಟೇಶ್‌ರವರು ವಾಕ್ ಔಟ್ ಮಾಡಿ ಹೊರಗೆ ಹೋದರು)